ರಿಟೈರ್ ಆಗುವವರೆಗೂ ಕಾದು ಇಬ್ಬರಿಗೂ ಇನ್ನು ವಿಶ್ರಾಂತಿ ಎನ್ನುವಾಗ ಇಬ್ಬರ ರಿಟೈರ್ಮೆಂಟ್ ಬೆನಿಫಿಟ್ ಹಣವನ್ನೂ ಸೇರಿಸಿ ಸ್ವಂತಕ್ಕೊಂದು ಮನೆ ಎನ್ನುವ ಸುಂದರ ಕಲ್ಪನೆಯಲ್ಲಿ ಖರೀದಿಸಿದ್ದ ಮನೆ. ಮನೆಯೆದುರಿನ ಸಣ್ಣ ಗೇಟು ಮುಖ್ಯ ರಸ್ತೆಗೆ ತೆರೆದುಕೊಳ್ಳುತ್ತಿತ್ತು. ಮನೆಯ ಬದಿಯ ಅಡ್ಡರಸ್ತೆಯಲ್ಲಿ ವಾಹನ ದಟ್ಟಣೆ ಇರದ ಕಾರಣ ಕಾರು ಡ್ರೈವ್ ಮಾಡಿಕೊಂಡು ಒಳಬರುವುದಕ್ಕೆ ಅನುಕೂಲವೆಂದು ದೊಡ್ಡ ಗೇಟನ್ನು ಅಲ್ಲಿ ಇರಿಸಲಾಗಿತ್ತು. ರಾಯರು ತಮ್ಮ ಹಳೇ ಮಾರುತಿ ಕಾರನ್ನು ಮಾರದೆ ಇಟ್ಟುಕೊಂಡಿದ್ದರಿಂದ ಒಂದೇ ಮನೆಗೆ ಎರಡೆರಡು ಗೇಟಿನ ಆ ವ್ಯವಸ್ಥೆಯನ್ನು ಹಾಗೆಯೇ ಮುಂದುವರೆಸಿಕೊಂಡು ಬಂದಿದ್ದರು.

ಸರಗಳ್ಳತನವಾದ ಕೆಲವು ವಾರಗಳ ಬಳಿಕ ಒಂದು ದಿನ ರಾಯರು ಮನೆಜಗಲಿಯಲ್ಲಿ ಕುಳಿತಿದ್ದರು. ಹತ್ತಾರು ಹುಡುಗರು ಗುಂಪಾಗಿ ಗೇಟು ದಾಟಿ ಒಳಗೆ ಬಂದರು. ಎಲ್ಲ ಇಪ್ಪತ್ತು ಮೂವತ್ತರ ವಯಸ್ಸಿನ ಹುಡುಗರು.

'ನಮಸ್ಕಾರ ಸರ್... ನಾವು ಈ ರೋಡಿನ ಕೊನೆಗಿರುವ ಆಟದ ಬಯಲಲ್ಲಿ ವರ್ಷಂಪ್ರತಿ ನಡೆಸುವ ಸಾರ್ವಜನಿಕ ಗಣೇಶೋತ್ಸವ ಕಮಿಟಿಯವರು. ನೀವು ಇಲ್ಲಿಗೆ ಹೊಸಬರು. ಇಲ್ಲಿ ನಾವು ವರ್ಷಂಪ್ರತಿ ಗಣೇಶೋತ್ಸವ ಗ್ರಾಂಡಾಗಿ ಸೆಲೆಬ್ರೇಟ್ ಮಾಡುತ್ತೇವೆ. ಹತ್ತಾರುಲಕ್ಷ ಖರ್ಚುಂಟು. ನೀವು ಶಕ್ತಿಮೀರಿ ಸಹಾಯ ಮಾಡಬೇಕು' ಅಂದ ಅವರಲ್ಲೊಬ್ಬ.

ರಾಯರು ಒಳಗೆ ಹೋಗಿ ಕೈಯಲ್ಲೊಂದು ಐನೂರರ ನೋಟು ಹಿಡಿದುಕೊಂಡು ಬಂದು ಗುಂಪಿನೆಡೆಗೆ ನೋಟನ್ನು ಚಾಚಿದರು.

'ಸರ್, ನಿಮಗೆ ಈ ವಠಾರದ ವ್ಯವಹಾರಗಳು ಗೊತ್ತಿಲ್ಲ. ನಾವು ಗಣೇಶೋತ್ಸವ ಮಾತ್ರ ಮಾಡೋದು. ಇಡೀ ವರ್ಷದಲ್ಲಿ ಬೇರೆ ಕಾರ್ಯಕ್ರಮಗಳಿಲ್ಲ. ಭಜನೆ, ಪೂಜೆ, ಪ್ರಸಾದ, ಮನರಂಜನೆ, ಸಾಂಸ್ಕೃತಿಕ ಸಭೆ, ವಿಸರ್ಜನೆ ಅಂತ ಇಡೀ ದಿನದ ಕಾರ್ಯಕ್ರಮ. ಮಂತ್ರಿಗಳು, ಸಿನಿಮಾ ನಟ ನಟಿಯರು ಬರುತ್ತಾರೆ. ಇಪ್ಪತ್ತೈದು ಸಾವಿರ ಅಥವಾ ಅದಕ್ಕಿಂತ ಜಾಸ್ತಿ ಕೊಟ್ಟವರಿಗೆ ಸಂಜೆ ನಡೆಯುವ ಸಾಂಸ್ಕೃತಿಕ ಸಭೆಯಲ್ಲಿ ಎದುರಿನ ಸೀಟುಗಳನ್ನು ಕಾದಿರಿಸುತ್ತೇವೆ. ಒಟ್ಟು ಹನ್ನೆರಡು ಸೀಟುಗಳು. ಹದಿಮೂರನೆಯವನಿಗೆ ಅಲ್ಲಿ ಅವಕಾಶ ಇಲ್ಲ. ಮತ್ತೆಲ್ಲ ಹಿಂದಿನ ಸೀಟಿನ ಸಾಲುಗಳು ಇಪ್ಪತ್ತು, ಹತ್ತು, ಐದು ಸಾವಿರದವರಿಗೆ. ಈಗಲೇ ಕೊಡಬೇಕೆಂದಿಲ್ಲ. ನಿಮ್ಮ ಘನತೆಗೆ ತಕ್ಕಂತಹ ಸಾಲು ಆಯ್ಕೆ ಮಾಡಿ ಹಣ ತಂದಿರಿಸಿಕೊಳ್ಳಿ. ಬರುವ ವಾರ ಪುನಃ ಬರುತ್ತೇವೆ' ಎನ್ನುತ್ತ ಅವರೆಲ್ಲ ಮೆಟ್ಟಲಿಳಿದು ಹೊರಟಾಗ ರಾಯರು ಕೈಯಲ್ಲೇ ಉಳಿದುಕೊಂಡ ಐನೂರರ ನೋಟನ್ನು ಕಿಸೆಗಿಳಿಸಿ ಇದೂ ಉಳಿಯಿತು ಎಂದು ಮನದಲ್ಲೇ ಹೇಳಿಕೊಂಡು ನಕ್ಕರು.

ಮರುದಿನ ಹೀಗೆಯೇ ಇನ್ನೊಂದು ತಂಡ ಬೆಳಿಗ್ಗೆನೇ ಹಾಜರಾಗಿತ್ತು. 'ಸರ್, ನಾವು ಈ ಲೇ ಔಟಿನ ಸಾಂಸ್ಕೃತಿಕ ವೇದಿಕೆಯವರು. ವರ್ಷಂಪ್ರತಿ ಸಾರ್ವಜನಿಕವಾಗಿ ಗಣೇಶನನ್ನು ಕೂರಿಸ್ತೇವೆ... ಲೇ ಔಟಿನ ಎಲ್ಲ ಮನೆಗಳಿಂದಲೂ ಈ ಬಾರಿ ಡೊನೇಶನ್ ಮಿನಿಮಮ್ ಹತ್ತು ಸಾವಿರ ಕಲೆಕ್ಟ್ ಮಾಡಬೇಕು ಅಂತ ಮೊನ್ನೆ ಕಾರ್ಯಕಾರಿಯಲ್ಲಿ ಸೂಚನೆ ನೀಡಿದ್ದಾರೆ...' ಅಂತ ಅವರಲ್ಲೊಬ್ಬ ಆರಂಭಿಸುತ್ತಲೇ ರಾಯರು 'ನಿನ್ನೆ ರಸ್ತೆಯ ಆಚೆಬದಿಯ ಮೈದಾನದಲ್ಲಿ ಗಣೇಶನನ್ನ ಕೂಡ್ರಿಸುತ್ತೇವೆ ಎಂದು ನಾಲ್ಕಾರು ಮಂದಿ ಬಂದು ಬರುವ ಸೋಮವಾರ ಬರ್ತೇವೆ, ದುಡ್ಡು ರೆಡಿ ಮಾಡಿಡಿ ಅಂತ ಹೇಳಿ ಹೋಗಿದ್ರು... ಇವತ್ತು ನೀವು ಬಂದು ಕೇಳ್ತಿದ್ದೀರಾ... ಅದೂ ಎಷ್ಟು... ನೂರಿನ್ನೂರಾದರೆ ಕೊಟ್ಟುಬಿಡುತ್ತಿದ್ದೆ. ನೀವು ಹತ್ತು ಸಾವಿರ ಮಿನಿಮಮ್ ಅಂತ ಬೇರೆ